PAPER CLIPPINGS

DEPARTMENT / SUBJECT:

NAME OF THE NEWS PAPER : ವಿಜಯವಾಣಿ

DATE : 12/07/2019

# ಸ್ಪೀಕರ್‌ಗೆ ಸುಪ್ರೀಂ ಗಡುವು

» ಇಂದೇ ಮಾಹಿತಿ ನೀಡಲು ಆದೇಶ

» ವಿಧಾನಸಭಾಧ್ಯಕ್ಷರ ಮನವಿ ತಿರಸ್ಕಾರ

■ ವಿಜಯವಾಣಿ ಸುದ್ದಿಜಾಲ ನವದೆಹಲಿ

ರಾಜೀನಾಮೆ ಸಲ್ಲಿಸುವ ಶಾಸಕರು ಗುರುವಾರ ಸಂಜೆ 6 ಗಂಟೆಗೆ ಸ್ಪೀಕರ್ ಭೇಟಿ ಮಾಡಿ ರಾಜೀನಾಮೆಗಳನ್ನು ಸಲ್ಲಿಸಬಹುದು. ಈ ಬಗ್ಗೆ ಗುರುವಾರವೇ ಸ್ಪೀಕರ್ ಸೂಕ್ತ ತೀರ್ಮಾನ ತೆಗೆದುಕೊಂಡು ಶುಕ್ರವಾರದ ವಿಚಾರಣೆ ವೇಳೆ ಮಾಹಿತಿ ನೀಡಬೇಕು ಎಂದು ಸುಪ್ರೀಂಕೋರ್ಟ್ ಆದೇಶ ನೀಡಿದೆ.

ಮುಖ್ಯ ನ್ಯಾಯಮೂರ್ತಿ ರಂಜನ್ ಗೊಗೊಯ್ ನೇತೃತ್ವದ ತ್ರಿಸದಸ್ಯ ಪೀಠದ ಮುಂದೆ ಅತೃಪ್ತ ಶಾಸಕರ ಪರ ವಕೀಲ ಮುಕುಲ್ ರೋಹಟ್ಗಿ ಅವರು 'ಸ್ಪೀಕರ್ ಪಕ್ಷಪಾತಿಯಾಗಿ ನಡೆದುಕೊಂಡಿದ್ದಾರೆ' ಎಂದು ಆರೋಪಿಸಿದ್ದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ಗುರುವಾರ ಸಂಜೆ ಶಾಸಕರ ಮನವಿಗಳನ್ನು ಪರಿಶೀಲಿಸಿ ಸ್ಪೀಕರ್ ತೀರ್ಮಾನ ತೆಗೆದುಕೊಳ್ಳಬೇಕು ಎಂದು ಗಡುವು ವಿಧಿಸಿತು. ಈ ಬೆಳವಣಿಗೆಯಾದ ಎರಡೇ ಗಂಟೆಯಲ್ಲಿ ಸುಪ್ರೀಂಕೋರ್ಟ್‌ಗೆ ವಕೀಲ ಅಭಿಷೇಕ್ ಮನು ಸಿಂಘ್ವಿ ಮೂಲಕ ತುರ್ತು ಅರ್ಜಿ ಸಲ್ಲಿಸಿದ ಸ್ಪೀಕರ್, ಕನಿಷ್ಠ ಕಾಲವಧಿಯಲ್ಲಿ ನನಗೆ ಈ ರಾಜೀನಾಮೆಗಳ ಕುರಿತು ತೀರ್ಮಾನ ತೆಗೆದುಕೊಳ್ಳಲು ಸಾಧ್ಯವಿಲ್ಲ. ನಾಳೆ ಮಧ್ಯರಾತ್ರಿ ತನಕವಾದರೂ ಸಮಯ ನೀಡಬೇಕು. ಹೀಗಾಗಿ ಬೆಳಗ್ಗೆ ನೀಡಿದ್ದ ಆದೇಶ ಹಿಂಪಡೆಯಬೇಕು ಎಂದು ವಿನಂತಿಸಿಕೊಂಡರು. ಈ ಮನವಿ ತಿರಸ್ಕರಿಸಿದ ನ್ಯಾಯಪೀಠ, ನಾವು ಈಗಾಗಲೇ ಆದೇಶ ನೀಡಿದ್ದೇವೆ. ಇದನ್ನು ಹಿಂಪಡೆಯಲು ಸಾಧ್ಯವಿಲ್ಲ. ನೀವು ಏನೇ ಹೇಳುವುದಿದ್ದರೂ ಶುಕ್ರವಾರದ ವಿಚಾರಣೆ ವೇಳೆ ತಿಳಿಸಿ ಎಂದು ಸ್ಪಷ್ಟಪಡಿಸಿತು. ವಿಚಾರಣೆ ವೇಳೆ, 'ನಾವು ರಾಜೀನಾಮೆ ನೀಡಿದರೂ ಸ್ಪೀಕರ್ ಸ್ವೀಕರಿಸುತ್ತಿಲ್ಲ ಎನ್ನುವುದು ಅಚ್ಚರಿಯನ್ನುಂಟು ಮಾಡಿದೆ' ಎಂಬ ವಕೀಲ ರೋಹಟ್ಗಿ ವಾದಕ್ಕೆ ಪ್ರತಿಕ್ರಿಯಿಸಿದ ಮುಖ್ಯ ನ್ಯಾಯಮೂರ್ತಿ ಗೊಗೊಯ್, ರಾಜೀನಾಮೆ ಕೊಟ್ಟರೂ ಅದನ್ನು ಸ್ಪೀಕರ್ ತೆಗೆದುಕೊಳ್ಳುತ್ತಿಲ್ಲ ಎಂದರೆ ನೀವೆಷ್ಟು ಅದೃಷ್ಟವಂತರು ನೋಡಿ ಎಂದು ಹಾಸ್ಯ ಚಟಾಕಿ ಹಾರಿಸಿದರು. ಶಾಸಕರು ರಾಜೀನಾಮೆ ನೀಡಿ ನಂತರ ಅದನ್ನು ಹಿಂತೆಗೆದುಕೊಂಡ ಅನೇಕ ಉದಾಹರಣೆಗಳಿವೆ. ಆದರೆ ಇದು ಪಕ್ಷಾಂತರವಲ್ಲ. ರಾಜೀನಾಮೆ ಮಾತ್ರ. ಹೀಗಾಗಿ ಇಂದು ಸಂಜೆ 6 ಗಂಟೆಗೆ ಸ್ಪೀಕರ್ ಭೇಟಿಗೆ ಅನುವು ಮಾಡಿಕೊಡಬೇಕು ಎಂದು ರೋಹಟ್ಗಿ ವಿನಂತಿಸಿಕೊಂಡರು. ಇದಕ್ಕೊಪ್ಪಿದ ನ್ಯಾಯಪೀಠ, ರಾಜೀನಾಮೆ ಸಲ್ಲಿಸುವ ಶಾಸಕರಿಗೆ ಸೂಕ್ತ ಭದ್ರತೆ ನೀಡುವಂತೆಯೂ ರಾಜ್ಯದ ಡಿಜಿಪಿಗೆ ಸೂಚನೆ ನೀಡಿತು.



## ರಮೇಶ್ ಅರ್ಜಿಯಲ್ಲೇನಿದೆ?

■ ಶಾಸಕರು ಸ್ವಇಚ್ಛೆಯಿಂದ ರಾಜೀನಾಮೆ ನೀಡಿದ್ದಾರಾ? ಇದರಲ್ಲಿ ಸತ್ಯಾಂಶ ಇದೆಯೇ ಎಂಬ ಬಗ್ಗೆ ಪರಿಶೀಲಿಸಲು ಸಮಯ ಬೇಕು. ಅವರ ವಾದ ನನಗೆ ತೃಪ್ತಿ ತರಬೇಕು.

■ ಸಂವಿಧಾನದ 190 ವಿಧಿಯಲ್ಲಿನ ಪ್ರಕರಣಕ್ಕೆ ಸಂಬಂಧಿಸಿದಂತೆ ಸುಪ್ರೀಂಕೋರ್ಟ್ ಸ್ಪೀಕರ್‌ಗೆ ಯಾವುದೇ ನಿರ್ದೇಶನ ಜಾರಿ ಮಾಡುವಂತಿಲ್ಲ.

■ ಅತೃಪ್ತ ಶಾಸಕರ ದೂರಿನಲ್ಲಿ ಸ್ಪೀಕರ್ ವಿಶ್ವಾಸಾರ್ಹತೆ ಪ್ರಶ್ನಿಸಲಾಗಿದೆ. ಇದಕ್ಕೆ ಸೂಕ್ತ ಉತ್ತರವನ್ನು ಅಫಿಡವಿಟ್ ಮುಖೇನ ನೀಡಲಿದ್ದೇನೆ. ■ ರಾಜೀನಾಮೆ ನೀಡಿರುವ ಕೆಲ ಶಾಸಕರನ್ನು ಅನರ್ಹಗೊಳಿಸಬೇಕು ಎಂಬ ಮನವಿಯೂ ನನ್ನ ಮುಂದಿದೆ. ಇದನ್ನು ಮೊದಲು ಪರಿಶೀಲಿಸಿ ಕಾನೂನಾತ್ಮಕ ಕ್ರಮ ಕೈಗೊಳ್ಳಬೇಕಿದೆ.

■ ಶಾಸಕರನ್ನು ಅನರ್ಹಗೊಳಿಸಬೇಕೆಂದು ಸಂವಿಧಾನದ 10ನೇ ಷೆಡ್ಯೂಲ್‌ನಡಿ ಫೆ.11, 2019ರಂದು ದೂರು ದಾಖಲಾಗಿದ್ದು, ವಿಚಾರಣೆ ನಡೆಯುತ್ತಿದೆ. ಈ ಅಂಶ ಸುಪ್ರೀಂಗೆ ನೀಡಿರುವ ದೂರಿನಲ್ಲಿಲ್ಲ.